## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ: | **342** |
| ಸದಸ್ಯರ ಹೆಸರು : | ಶ್ರೀ. ಎನ್. ಎಸ್. ಬೋಸ್‌ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 12.12.2018. |
| ಉತ್ತರಿಸುವ ಸಚಿವರು : | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಯಚೂರು ಜಿಲ್ಲೆಯಲ್ಲಿರುವ ಜನ ಸಾಮಾನ್ಯರುಗಳಿಗೆ ಮರಳು ಸರಬರಾಜುವಿನಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: | **ರಾಯಚೂರು ಜಿಲ್ಲೆಯಲ್ಲಿ ಮರಳಿನ ಸರಬರಾಜಿನಲ್ಲಿ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.**<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ–2016 ರಂತೆ ರಾಯಚೂರು ಜಿಲ್ಲೆ ತುಂಗಭದ್ರಾ ಹಾಗೂ ಕೃಷ್ಣಾ ನದಿ ಪಾತ್ರದ ವ್ಯಾಪ್ತಿಯಲ್ಲಿ ಗುರುತಿಸಿರುವ 27 ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್–ಕಂ–ಇ–ಹರಾಜು ಮೂಲಕ ವಿಲೇವಾರಿ ಮಾಡಲಾಗಿದ್ದು, ಯಶಸ್ವಿ ಬಿಡ್ಡುದಾರರಿಗೆ 5 ವರ್ಷಗಳ ಅವಧಿಗೆ ಮರಳು ಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ.<br>• ಪ್ರಸ್ತುತ ಜಿಲ್ಲೆಯ ನದಿ ಪಾತ್ರಗಳಲ್ಲಿ ನೀರಿನ ಹರಿವು ಇರುವ ಕಾರಣ ಸದರಿ ಮಂಜೂರಾದ 27 ಮರಳು ಬ್ಲಾಕ್‌ಗಳ ಪೈಕಿ 14 ಮರಳು ಬ್ಲಾಕ್‌ಗಳು ಕಾರ್ಯನಿರ್ವಹಿಸುತ್ತಿರುತ್ತಿವೆ. 2017–18 ಸಾಲಿನಲ್ಲಿ **131464** ಮೆಟ್ರಿಕ್ ಟನ್ ಹಾಗೂ 2018–19ನೇ ಸಾಲಿನ ನವೆಂಬರ್ 2018ರ ಅಂತ್ಯದವರೆಗೆ 60830 ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಕಾಮಗಾರಿಗಳಿಗೆ ಪೂರೈಸಲಾಗಿದೆ. ನದಿ ಪಾತ್ರದಲ್ಲಿ ನೀರಿನ ಹರಿವು ಕಡಿಮೆಯಾದ ನಂತರ ಉಳಿದ ಎಲ್ಲಾ ಮರಳು ಬ್ಲಾಕ್‌ಗಳಲ್ಲಿ ಮರಳು ಗಣಿಗಾರಿಕೆ ಪ್ರಾರಂಭಿಸಿ ಮರಳನ್ನು ಸಾರ್ವಜನಿಕರಿಗೆ ಪೂರೈಸಲು ಕ್ರಮವಹಿಸಲಾಗುವುದು.<br>• ಸರ್ಕಾರಿ ಕಾಮಗಾರಿಗಳಿಗೆ 5 ಮರಳು ಬ್ಲಾಕ್‌ಗಳಲ್ಲಿ ಮೀಸಲಿರಿಸಲಾಗಿದ್ದು, ಇವುಗಳ ಪೈಕಿ 02 ಮರಳು ಬ್ಲಾಕ್‌ಗಳಿಗೆ ಮರಳು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ 2 ಮರಳು ಬ್ಲಾಕ್‌ಗಳಿಂದ 2017–18 ನೇ ಸಾಲಿನಲ್ಲಿ 9000 ಮೆ.ಟನ್ ಹಾಗೂ 2018–19ನೇ ಸಾಲಿನ ನವೆಂಬರ್ 2018ರ ಅಂತ್ಯದ ವರೆಗೂ 21000 ಮೆ.ಟನ್ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ. |

--2--

| | | |
|---|---|---|
| | | • ಮುಂದುವರೆದು, ಜಿಲ್ಲೆಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಹಾಗೂ ದಾಸ್ತಾನಿನಡಿಯಲ್ಲಿ ವಶಪಡಿಸಿಕೊಂಡಿರುವ ಮರಳನ್ನು ನಿಯಮಾನುಸಾರ ವಿಲೇಪಡಿಸಲಾಗಿರುತ್ತದೆ. 2017-18ನೇ ಸಾಲಿನಲ್ಲಿ ಅಂದಾಜು **10,126 ಮೆ.ಟನ್** ಹಾಗೂ 2018-19ನೇ ಸಾಲಿನ ನವೆಂಬರ್ 2018ರ ಅಂತ್ಯದವರೆಗೆ ಅಂದಾಜು **17,971 ಮೆ.ಟನ್** ಮರಳನ್ನು ವಶಪಡಿಸಿಕೊಂಡು ಸರ್ಕಾರಿ ಕಾಮಗಾರಿಗಳಿಗೆ ನೀಡಲಾಗಿರುತ್ತದೆ.<br>• ಜಿಲ್ಲೆಯಲ್ಲಿ 05 ಎಂ-ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, 2017-18 ನೇ ಸಾಲಿನಲ್ಲಿ **1.20 ಲಕ್ಷ ಮೆ.ಟನ್** ಹಾಗೂ 2018-19ನೇ ಸಾಲಿನ ನವೆಂಬರ್ 2018ರ ಅಂತ್ಯಕ್ಕೆ **0.42 ಲಕ್ಷ** ಮೆ.ಟನ್ ಎಂ-ಸ್ಯಾಂಡ್‌ನ್ನು ಉತ್ಪಾದಿಸಿ ಸಾರ್ವಜನಿಕರಿಗೆ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ.<br>ಈ ರೀತಿ ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಸರಬರಾಜಿನಲ್ಲಿ ತೊಂದರೆಯಾಗದಂತೆ, ಮರಳನ್ನು ಪೂರೈಸಲಾಗುತ್ತಿದೆ. |
| ಆ | ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಮರಳು ವಿತರಣೆಯಲ್ಲಿ ಅನುಸರಿಸುತ್ತಿರುವ ಪದ್ಧತಿಗಳೇನು (ವಿವರ ನೀಡುವುದು) | • ಆಂಧ್ರ ಪ್ರದೇಶ ರಾಜ್ಯದಲ್ಲಿ 2015ರ ಉಚಿತ ಮರಳು ನೀತಿಯಂತೆ, ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪರಿಸರ ಅನುಮತಿ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದುಕೊಂಡು, ಸಾರ್ವಜನಿಕರಿಗೆ ಉಚಿತವಾಗಿ ಮರಳನ್ನು ಪೂರೈಸಲಾಗುತ್ತಿದೆ. ಸಾರ್ವಜನಿಕರು ಮರಳಿನ ಸಾಗಾಣಿಕೆ ಹಾಗೂ ಇತರೆ ಖರ್ಚುಗಳನ್ನು ಭರಿಸಬೇಕಾಗಿರುತ್ತದೆ. ಮರಳು ಬ್ಲಾಕ್‌ಗಳಲ್ಲಿ ಮರಳನ್ನು ಸ್ವ ಸಹಾಯ ಸಂಘಗಳು ವಾಹನಗಳಿಗೆ ಮರಳನ್ನು ತುಂಬಿಕೊಡುವ ಕೆಲಸವನ್ನು ನಿರ್ವಹಿಸುತ್ತವೆ ಅಥವಾ ಸ್ವತಃ ಗ್ರಾಹಕರೆ ನೇರವಾಗಿ ಮರಳನ್ನು ವಾಹನಗಳಿಗೆ ತುಂಬಿಕೊಂಡು ಹೋಗುತ್ತಾರೆ.<br>• ತಮಿಳುನಾಡು ರಾಜ್ಯದಲ್ಲಿ ಮರಳು ಗಣಿಗಾರಿಕೆ, ಸಾಗಾಣಿಕೆ ಸಂಗ್ರಹಣೆ ಮತ್ತು ಮರಳು ವಿಲೇವಾರಿ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಲಾಗುತ್ತದೆ. ಲೋಕೋಪಯೋಗಿ ಇಲಾಖೆಯು ಸಾರ್ವಜನಿಕರಿಗೆ ನಿಗಧಿತ ದರದಲ್ಲಿ ಮರಳನ್ನು ಪೂರೈಸುತ್ತದೆ. |

ಸಂಖ್ಯೆ: ಸಿಐ 437 ಎಂಎಂಎನ್ 2018

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು.